ಓದಿ, ನಕ್ಕು ಹಗುರಾಗಿ

# ಗುಂಡಿ ಗಂಡಾಂತರ

**ಮದುವೆಗೆ ಹೊರಟ ಶಂಕ್ರಿ ಮತ್ತು ಸುಮಿ ಕೊನೆಗೆ ಹೊರಟಿದ್ದಾದರೂ ಎಲ್ಲಿ? ಎಲ್ಲಿಗೆ ಪಯಣ ಎನ್ನುವುದನ್ನು ರಸ್ತೆ ಗುಂಡಿಗಳೇ ನಿರ್ಣಯಿಸುತ್ತವೆ.**

■ **ಮಣ್ಣೆ ರಾಜು**
ಕಲೆ: ಸಂತೋಷ್ ಸಸಿಹಿತ್ಲು

‘ಮದುವೆ ಮನೆಯಲ್ಲಿ ಗತ್ತು, ಘನತೆ ಕಾಪಾಡಿಕೊಳ್ಳಿ. ಹೆಂಗಸರ ಅಲಂಕಾರ, ಹಾವಭಾವ ನೋಡಿಕೊಂಡು ಕೂರಬೇಡಿ. ಓಡಾಡಿಕೊಂಡು ಎದುರಿಗೆ ಬರುವ ಸ್ನೇಹಿತರು, ಸಂಬಂಧಿಗಳನ್ನು ಮಾತನಾಡಿಸಿ ಕಷ್ಟಸುಖ ವಿಚಾರಿಸಿ, ಗೊತ್ತಾಯ್ತಾ?...’ – ಬೈಕ್ ಓಡಿಸುವ ಗಂಡ ಶಂಕ್ರಿಗೆ ಹಿಂದೆ ಕುಳಿತ ಸುಮಿ ಹೇಳಿದಳು.

ಶಂಕ್ರಿ ಸಡನ್ನಾಗಿ ಬ್ರೇಕ್ ಹಾಕಿದ.

‘ಯಾಕ್ರಿ, ಏನಾಯ್ತು?’

‘ಗುಂಡಿ ಅಡ್ಡ ಬಂತು’ ಅಂದ.

‘ಸಾರ್ವಜನಿಕ ರಸ್ತೆಯಲ್ಲಿ ಸರ್ಕಾರದ ಗುಂಡಿಗಳು ಇದ್ದೇಇರುತ್ತವೆ, ನೋಡಿಕೊಂಡು ಓಡಿಸಿ...’ ಎಂದು ಒಡವೆ ಹೊರೆ ಹೊತ್ತಿದ್ದ ಸುಮಿ ಮಣ ಭಾರದ ರೇಷ್ಮೆಸೀರೆ ಸೆರಗು ಸರಿಪಡಿಸಿಕೊಂಡು, ಕರ್ಚೀಫಿನಲ್ಲಿ ಮೇಕಪ್ ಮುಖ ಒತ್ತಿಕೊಂಡಳು.

‘ಹೋದ ವಾರ ಹೋಗಿದ್ದ ಮದುವೆಯಲ್ಲಿ ಗಂಡಿಗೆ ಕೊಡಬೇಕಾದ ಮುಯ್ಯಿ ಕವರನ್ನು ಹೆಣ್ಣಿಗೆ ಕೊಟ್ಟು ಅವಾಂತರ ಮಾಡಿದ್ರಿ. ಈ ಮದುವೆಯಲ್ಲಿ ಗಂಡಿಗೆ ಕೊಡಲು ಹೋಗಬೇಡಿ, ಹೆಣ್ಣಿಗೇ ಕೊಡಿ.



ನೆತ್ತರದೇ ಯುಗಾದಿ